
ಎನ್. ಸಂಧ್ಯಾ ರಾಣಿ

ಕಲೆ: ಆದಿತ್ಯ ಸದಾಶಿವ್

# ಟ್ರೂತ್ ಆರ್ ಡೇರ್



'ಹೇ ಕಮಾನ್ ಲೆಟ್ಸ್ ಪ್ಲೇ ಟ್ರೂತ್ ಆರ್ ಡೇರ್' ಮಧುವಂತಿ ಖಾಲಿ ಪೆಪ್ಸಿ ಬಾಟಲಿ ತಿರುಗಿಸುತ್ತಾ ಹೇಳುವಾಗ ಆ ನಾಲ್ವರೂ ನಗರದ ಬದುಕು ತರುವ ಅಪರಿಚಿತತೆಯ ಸ್ನೇಹದ ಶಿಷ್ಟಾಚಾರವನ್ನು ನಿಧಾನವಾಗಿ ಕಳಚಿಕೊಳ್ಳುತ್ತಿದ್ದರು. ಈ ಅಪರಿಚಿತತೆಯ ಸ್ನೇಹ ಉಳಿಸಿಕೊಳ್ಳಲು ಮಹಾನಗರ ಸಾಕಷ್ಟು ನೆರವಾಗುತ್ತಿತ್ತು. ತಿಂಗಳಾನುಗಟ್ಟಲೆ ಒಬ್ಬರ ಜೊತೆ ಮಾತನಾಡಿ ಸಹ ಅವರ ಮನೆಯಲ್ಲಿ ಎಷ್ಟು ಜನ ಇದ್ದಾರೆ ಎನ್ನುವುದು ತಿಳಿಯದೆ ಹೋಗಬಹುದು. ಪಕ್ಕದ ಮನೆಯಲ್ಲಿ ಇದ್ದರೂ ಯಾರಿಗೆ ಯಾರು ಏನಾಗಬೇಕು ಎಂದು ತಿಳಿಯದೆ ಹೋಗಬಹುದು. ಸಣ್ಣಸಣ್ಣ ದ್ವೀಪಗಳ ಹಾಗಿರುವ ಆಫೀಸು, ಅಪಾರ್ಟ್‌ಮೆಂಟು, ಜಿಮ್ಮು, ಮೆಟ್ರೊ ರೈಲು, ವಾಕಿಂಗ್ ಪಾರ್ಕು ಇಲ್ಲೆಲ್ಲಾ ಸಿಕ್ಕುವ ಸ್ನೇಹಿತರು ಕೇವಲ ಆ ಬದುಕಿನ ಮುಖವನ್ನು ಮಾತ್ರ ನೋಡಿ, ಅಲ್ಲಿ ಮಾತ್ರ ಆತ್ಮೀಯರಾಗಿರಬಹುದು. ಆ ದ್ವೀಪದಾಚೆಗೆ ಆ ಸಂಬಂಧಕ್ಕೆ ಅಸ್ತಿತ್ವವೇ ಇಲ್ಲದಿರಬಹುದು. ಇದು ಮಹಾನಗರಗಳ ಮಿತಿ ಮತ್ತು ಕೆಲವೊಮ್ಮೆ ಶಕ್ತಿ. ಇಂದು ಕಲ್ಯಾಣಿಯ ಮನೆಯಲ್ಲಿ ಸೇರಿರುವ ಈ ನಾಲ್ವರೂ ಹಾಗೆಯೇ ಬೆಳಗಿನ 90 ನಿಮಿಷಗಳು ಮಾತ್ರ ಒಬ್ಬರಿಗೊಬ್ಬರು ಸಿಕ್ಕು ಆಮೇಲೆ ತಮ್ಮ ತಮ್ಮ ಬದುಕಿಗೆ ಹಿಂದಿರುಗುತ್ತಿದ್ದವರು.